SEPTEMBER 15, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**'ಪ್ರಧಾನಮಂತ್ರಿ ಕುಸುಮ ಬಿ' ಯೋಜನೆ;** ಬಳ್ಳಾರಿ ಜಿಲ್ಲೆಯ, ವಿವಿಧ ತಾಲೂಕುಗಳಲ್ಲಿ, ಸೌರ ಪಂಪ್‌ಸೆಟ್ ಆಧರಿಸಿ, ರೈತರಿಂದ, ಮಾದರಿ ತೋಟಗಾರಿಕೆ.

**ಟಿ.ಸಿ.ಎಸ್. ಸಾಮಾಜಿಕ ಹೊಣೆಗಾರಿಕೆ** ನಿಧಿ ಅನುದಾನದಡಿ, ವಿಜಯಪುರದ ಐತಿಹಾಸಿಕ ತಾಜ್ ಬಾವಡಿ, ಪುನರುಜ್ಜೀವನ.

**ಶ್ರೇಷ್ಠ ಅಭಿಯಂತರ, ಭಾರತರತ್ನ,** ಸರ್ ಎಂ. ವಿಶ್ವೇಶ್ವರಾಯ ಅವರ ಜನ್ಮ ದಿನವಿಂದು; ರಾಷ್ಟ್ರೀಯ ಅಭಿಯಂತರರ ದಿನಾಚರಣೆ.

**'ಮಾನವ ಹಕ್ಕುಗಳತ್ತ ಆದ್ಯತೆ ನೀಡಿ,** ಗಮನಹರಿಸೋಣ', ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ.

<><><>

**ಬಳ್ಳಾರಿ ತಾಲೂಕು ಕಪ್ಪಗಲ್ಲು, ಜಾಲಿಬೆಂಚಿ,** ಎತ್ತಿನ ಬೂದಿಹಾಳ್ ಹಾಗೂ ಇಬ್ರಾಹಿಂಪುರ ಗ್ರಾಮಗಳ ರೈತರು, 'ಪ್ರಧಾನಮಂತ್ರಿ ಕುಸುಮ ಬಿ' ಯೋಜನೆಯಡಿ, ಪಂಪ್‌ಸೆಟ್ ಅಳವಡಿಸಿಕೊಂಡು, ಲಭ್ಯ ನೀರು ಬಳಸಿ ಭತ್ತ, ಮೆಣಸಿನಕಾಯಿ, ಶೇಂಗಾ, ಅಂಜೂರ, ಮೆಕ್ಕೆಜೋಳ ಹಾಗೂ ವಿವಿಧ ತೋಟಗಾರಿಕೆ ಬೆಳೆಗಳಿಗೆ ನೀರು ಹಾಯಿಸುತ್ತಿದ್ದಾರೆ. ವಿದ್ಯುತ್ ವಿತರಣಾ ಕಂಪೆನಿಗಳ ಗ್ರಿಡ್ ಮೇಲಿನ ಒತ್ತಡ ಗಣನೀಯವಾಗಿ, ಕಡಿಮೆಯಾಗಲಿದೆ. ಈ ಯೋಜನೆಯಡಿ 3 ಅಶ್ವಶಕ್ತಿಯಿಂದ 10 ಅಶ್ವಶಕ್ತಿ ವರೆಗಿನ ಸಾಮರ್ಥ್ಯದ ಸೌರ ಪಂಪ್‌ಸೆಟ್ ಗಳಿಗೆ ಧನಸಹಾಯ ಒದಗಿಸಲಾಗುತ್ತಿದೆ. ಕೇಂದ್ರ ಸರ್ಕಾರ ಶೇಕಡ 30, ರಾಜ್ಯ ಸರ್ಕಾರ ಶೇಕಡ 50 ರಷ್ಟು ಧನಸಹಾಯ ನೀಡುತ್ತಿದ್ದು, ರೈತರು ಕೇವಲ ಶೇಕಡ 20 ರಷ್ಟು ವಂತಿಗೆ ಪಾವತಿಸಬೇಕಾಗುತ್ತದೆ. ಬಳ್ಳಾರಿ ತಾಲೂಕು ವ್ಯಾಪ್ತಿಯಲ್ಲಿ, 112 ಜನ ರೈತರು, ಸೌರ ಪಂಪ್‌ಸೆಟ್‌ಗೆ ಅರ್ಜಿ ಸಲ್ಲಿಸಿದ್ದು, 25 ಜನ ರೈತರು ವಂತಿಗೆ ಪಾವತಿಸಿದ್ದಾರೆ. ಈಗಾಗಲೇ 22 ಜನ ರೈತರು ಯಶಸ್ವಿಯಾಗಿ ಕುಸುಮ–ಬಿ ಯೋಜನೆ ಸೌಲಭ್ಯ ಪಡೆದಿದ್ದಾರೆ ಎಂದು ಬಳ್ಳಾರಿ ಜೆಸ್ಕಾಂ ಗ್ರಾಮೀಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ, ಮೋಹನಬಾಬು ತಿಳಿಸಿದ್ದಾರೆ.

<><><>

**ವಿಜಯಪುರ ಜಿಲ್ಲೆ** ಬರ ಪರಿಹಾರದ ಬಗ್ಗೆ, ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟ ಸಭೆಯಲ್ಲಿ, ತಾವು ಪ್ರಬಲವಾಗಿ ಪ್ರತಿಪಾದಿಸಿದ್ದಾಗಿ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ, ತಿಳಿಸಿದ್ದಾರೆ. ವಿಜಯಪುರದಲ್ಲಿ ಮಾತನಾಡಿದ ಅವರು, ಜಿಲ್ಲೆಯ ಹಲವು ಭಾಗಗಳಲ್ಲಿ ಮಳೆ ಕೊರತೆ, ಕೃಷಿ ಚಟುವಟಿಕೆಗಳ ಮೇಲೆ ಉಂಟಾಗಿರುವ ಪರಿಣಾಮ ಹಾಗೂ ರೈತರ ಸಂಕಷ್ಟದ ಕುರಿತು, ತಾವು ಗಮನ ಸೆಳೆದಿದ್ದಾಗಿ ನುಡಿದರು. ಟಾಟಾ ಕನ್ಸಲ್ಟನ್ಸಿ ಸರ್ವಿಸಸ್, 19 ಕೋಟಿ ರೂಪಾಯಿ ವೆಚ್ಚದಲ್ಲಿ, ಸಾಮಾಜಿಕ ಹೊಣೆಗಾರಿಕೆ ನಿಧಿ ಅನುದಾನದಡಿ, ವಿಜಯಪುರದ ಐತಿಹಾಸಿಕ ತಾಜ್ ಬಾವಡಿ, ಕೆರೆ ಸಂರಕ್ಷಣೆ ಮತ್ತು ಪುನರುಜ್ಜೀವನ ಕಾಮಗಾರಿ ಕೈಗೊಳ್ಳಲಾಗಿದೆ. 9 ಕೋಟಿ ರೂಪಾಯಿ ಅನುದಾನ, ಈಗಾಗಲೇ ಬಿಡುಗಡೆಯಾಗಿದೆ, ಎಂದರು. ಬಾವಡಿ ಕಾಮಗಾರಿ ಹಿನ್ನೆಲೆ, ಗಣೇಶ ಮೂರ್ತಿಗಳ ವಿಸರ್ಜನೆಗೆ, ಪರ್ಯಾಯ ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

<><><>

**ರಾಜ್ಯದ** 50 ಲಕ್ಷ ವಿದ್ಯಾರ್ಥಿಗಳಿಗೆ, ಉಚಿತ ಬಸ್ ಪಾಸ್ ಒದಗಿಸಲಾಗಿದ್ದು, ವಾರ್ಷಿಕ 350 ಕೋಟಿ ರೂಪಾಯಿ ವೆಚ್ಚವಾಗಲಿದೆ ಎಂದು, ಸಾರಿಗೆ ಖಾತೆ ಸಚಿವ ಭೈರತಿ ಸುರೇಶ ತಿಳಿಸಿದ್ದಾರೆ. ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕು, ಬೆಳ್ಳೂರು ಹೋಬಳಿ, ಕನ್ನಾಘಟ್ಟ ಗ್ರಾಮದಲ್ಲಿ, ನೂತನ ದೇವಾಲಯದ ಉದ್ಘಾಟನಾ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು. ಮುಖ್ಯಮಂತ್ರಿ ಅವರು, ವಿದ್ಯಾರ್ಥಿಗಳ ಬಸ್ ಪಾಸ್ ಹಣವನ್ನು, ರಾಜ್ಯ ಬೊಕ್ಕಸದಿಂದ ಭರಿಸುವ ಭರವಸೆ ನೀಡಿದ್ದಾರೆ, ಎಂದರು. ಮಂಡ್ಯ ಜಿಲ್ಲೆಗೆ, ಶೀಘ್ರ 100 ಬಸ್‌ಗಳು ಮಂಜೂರಾಗಲಿವೆ ಎಂದು, ಸಚಿವರು ಹೇಳಿದರು.

<><><>

**ಬೀದರ ಜಿಲ್ಲೆ, ಚೌರಾದ, ಬಸವಕಲ್ಯಾಣ,** ಭಾಲ್ಕಿ ಸೇರಿದಂತೆ, ಐದು ತಾಲೂಕುಗಳಲ್ಲಿ, ಅಪಾಯದ ಸ್ಥಿತಿಯಲ್ಲಿರುವ, ಶಾಲೆಗಳ ಕೊಠಡಿಗಳನ್ನು, ತೆರವುಗೊಳಿಸಲು ಲೋಕೋಪಯೋಗಿ ಇಲಾಖೆ, ಕ್ರಮ ಕೈಗೊಂಡಿದೆ. ಶಾಲಾ ಶಿಕ್ಷಣ ಇಲಾಖೆ ಪಟ್ಟಿ ಆಧರಿಸಿ, ಜಿಲ್ಲೆಯ 434 ಶಾಲೆಗಳ, ಸಾವಿರದ 311 ಶಿಥಿಲ ಕೊಠಡಿಗಳನ್ನು ನೆಲಸಮಗೊಳಿಸಲು, ಕ್ರಮ ಕೈಗೊಳ್ಳಲಾಗುತ್ತಿದೆ.

<><><>

**"ನಾವೀನ್ಯತೆ ಮತ್ತು ಡಿಜಿಟಲೀಕರಣದ ಮೂಲಕ,** ಸುಸ್ಥಿರ ಭವಿಷ್ಯಕ್ಕಾಗಿ ಸಕ್ಷಮ ಅಭಿಯಾಂತ್ರಿಕತೆ" ಎಂಬ ಧ್ಯೇಯದೊಂದಿಗೆ, ಭಾರತರತ್ನ ಸರ್. ಎಂ. ವಿಶ್ವೇಶ್ವರಾಯ ಅವರ ಜನ್ಮ ದಿನದ ಅಂಗವಾಗಿ, ಇಂದು, ರಾಷ್ಟ್ರೀಯ ಅಭಿಯಂತರರ ದಿನಾಚರಣೆ. ಅವಿಭಜಿತ ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲೂಕು, ಮುದ್ದೇನಹಳ್ಳಿಯಲ್ಲಿ, 1861 ರಲ್ಲಿ ಸರ್ ಎಂ. ವಿಶ್ವೇಶ್ವರಾಯ ಜನಿಸಿದರು. ಸರ್ ಎಂ.ವಿಶ್ವೇಶ್ವರಾಯ ಅವರ, ಅಭಿಯಾಂತ್ರಿಕ ಸಾಧನೆಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ನಿವೃತ್ತ ಇತಿಹಾಸ ಪ್ರಾಧ್ಯಾಪಕ, ಧಾರವಾಡದ ಡಾಕ್ಟರ್ ಬಸವರಾಜ ಅಕ್ಕಿ.

<><><>

**'ಮಾನವ ಹಕ್ಕು ಆದ್ಯತೆ: ಗಮನಹರಿಸೋಣ'** ಎಂಬ ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ. ಬೆಂಗಳೂರಿನ, ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ವಿಶೇಷ ಕಾರ್ಯಕ್ರಮವನ್ನು, ಸಮಾಜ ಕಲ್ಯಾಣ ಇಲಾಖೆ, ಆಯೋಜಿಸಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಉದ್ಘಾಟಿಸಲಿದ್ದು, ಉಪ ಮುಖ್ಯಮಂತ್ರಿ ಡಾಕ್ಟರ್ ಜಿ. ಪರಮೇಶ್ವರ, ವಿಧಾನ ಪರಿಷತ್ ಸಭಾಪತಿ ಸಲೀಂ ಅಹ್ಮದ್ ಮತ್ತು ವಿಧಾನಸಭಾಧ್ಯಕ್ಷ ಜಿ.ಎಸ್. ಪಾಟೀಲ, ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

<><><>

**ಹಾವೇರಿ ಜಿಲ್ಲೆ, ಸವಣೂರು ತಾಲೂಕು,** ಕುಣಿಮೆಳ್ಳಿಹಳ್ಳಿ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ, ಪ್ರೌಢಶಾಲಾ ವಿಭಾಗದಲ್ಲಿ ವಿಜ್ಞಾನ ವಿಷಯದ ಸಹ ಶಿಕ್ಷಕಿ, ಕೆ.ಬಿ.ರೇಖಾ ಪರಿಣಾಮಕಾರಿ ಬೋಧನಾ ವಿಧಾನಗಳನ್ನು ಬಳಸಿ, ಗಮನ ಸೆಳೆದಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಪ್ರಯೋಗದ ಕುರಿತು, ಮಾಹಿತಿ ನೀಡಿದ್ದಾರೆ.

<><><>

**ಮಣ್ಣು, ಪರಿಸರ ಹಾಗೂ ನೈಸರ್ಗಿಕ** ಸಂಪನ್ಮೂಲಗಳ ಸಂರಕ್ಷಣೆಗೆ, ಕೊಡುಗೆ ನೀಡುತ್ತಿರುವ, ಜೋಡೆತ್ತು ಅವಲಂಬಿತ ರೈತರನ್ನು, 'ದೇವರು ಮೆಚ್ಚುವ ನೇಗಿಲಯೋಗಿಗಳು' ಎಂದು ಗುರುತಿಸಿ, ಗೌರವಿಸುವ ಕಾರ್ಯಕ್ರಮ, ವಿಜಯಪುರ ಜಿಲ್ಲೆ, ಬಸವನಬಾಗೇವಾಡಿ ತಾಲೂಕು, ಪಿ.ಯು. ನಂದಿಹಾಳ ಗ್ರಾಮದಲ್ಲಿ ಜರುಗಿತು. ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಪ್ರೇರಣೆಯಿಂದ, ಕೃಷಿ ಪದವಿಧರರು ಆರಂಭಿಸಿರುವ, 'ನಂದಿ ಕೂಗು' ಅಭಿಯಾನದ ಅಂಗವಾಗಿ, ಗ್ರಾಮದ ಜೋಡೆತ್ತಿನ ಕೃಷಿಕರಿಗೆ, ಅಭಿನಂದನಾ ಪತ್ರ ನೀಡಿ, ಸಾಂಪ್ರದಾಯಿಕ ಕೃಷಿ ಪದ್ಧತಿಯ ಮಹತ್ವ ಸಾರಲಾಯಿತು. ರಾಜ್ಯದಲ್ಲಿ ನಂದಿ ಕೃಷಿ ಸಂಸ್ಕೃತಿ ಪುನಃಶ್ಚೇತನ ಕಾನೂನು ಜಾರಿಗೆ ಆಗ್ರಹಿಸಿ ಮುಖ್ಯಮಂತ್ರಿ ಅವರಿಗೆ, ಮನವಿ ಸಲ್ಲಿಸುವುದಾಗಿ, ಗ್ರಾಮದ ಹಿರಿಯರಾದ, ಬಸವರಾಜ ಮನಗೂಳಿ ತಿಳಿಸಿದರು.

<><><>

**ಬೀದರ ಜಿಲ್ಲೆ, ಭಾಲ್ಕಿಯ ಸಿದ್ಧಾರ್ಥ್** ನಗರದಲ್ಲಿ, 1 ಕೋಟಿ 18 ಲಕ್ಷ ರೂಪಾಯಿ ಅನುದಾನದಲ್ಲಿ, ನೂತನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ಮಾಣಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಶಂಕುಸ್ಥಾಪನೆ ನೆರವೇರಿಸಿದರು. ಜನರಿಗೆ ಗುಣಮಟ್ಟದ ಆರೋಗ್ಯ ಸೇವೆಗಳು, ಅವರ ವಾಸಸ್ಥಳದ ಸಮೀಪದಲ್ಲೇ ಲಭ್ಯವಾಗಬೇಕು ಎಂಬ ಉದ್ದೇಶದಿಂದ, ಆರೋಗ್ಯ ಕೇಂದ್ರದ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು, ಸಚಿವರು ತಿಳಿಸಿದರು.

<><><>

**ಬಿಳಿಗಿರಿರಂಗನಾಥ ದೇವಾಲಯ ವ್ಯಾಪ್ತಿಯ,** ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಚಾಮರಾಜನಗರ ತಾಲೂಕು, ಬಡಗಲಪುರ ಗ್ರಾಮದ. 65 ವರ್ಷದ ಬಸವಣ್ಣ ಎಂಬುವವರು, ಹಸುಗಳಿಗೆ ಹುಲ್ಲು ತರಲು ಕಾಡಿಗೆ ಹೋದಾಗ, ಹುಲಿ ದಾಳಿಯಿಂದ ಮೃತಪಟ್ಟ ಘಟನೆ ನಡೆದಿದೆ. ಕಾಡಾನೆ ದಾಳಿಗೆ, ಗುಂಡ್ಲುಪೇಟೆ ತಾಲೂಕು, ಕೋಟೆಕೆರೆ ಗ್ರಾಮದ ಜನ್ನೂರ ನಾಯಕ ಎಂಬ ಕೃಷಿಕ ಮೃತಪಟ್ಟಿದ್ದಾರೆ.

<><><>

**ಕೊಪ್ಪಳ ಜಿಲ್ಲೆಯಾದ್ಯಂತ ಗಣೇಶೋತ್ಸವ ಸಂಭ್ರಮದ ಹಿನ್ನೆಲೆ,** ಡ್ರೋನ್ ಕ್ಯಾಮೆರಾಗಳ ಮೂಲಕ, ಕಣ್ಗಾವಲು ವ್ಯವಸ್ಥೆ ರೂಪಿಸಲಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ. ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, 40ಕ್ಕೂ ಹೆಚ್ಚು ಸಂಚಾರಿ ಮೂರ್ತಿ ವಿಸರ್ಜನಾ ವಾಹನಗಳ ವ್ಯವಸ್ಥೆ ಮಾಡಲಾಗಿದೆ ಎಂದು, ಪಾಲಿಕೆ ಆಯುಕ್ತ ಡಾಕ್ಟರ್ ಮಹಾಂತೇಶ ಹೇಳಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**'ಪ್ರಧಾನಮಂತ್ರಿ ಕುಸುಮ ಬಿ' ಯೋಜನೆ;** ಬಳ್ಳಾರಿ ಜಿಲ್ಲೆಯ, ವಿವಿಧ ತಾಲೂಕುಗಳಲ್ಲಿ, ಸೌರ ಪಂಪ್‌ಸೆಟ್ ಆಧರಿಸಿ, ರೈತರಿಂದ, ಮಾದರಿ ತೋಟಗಾರಿಕೆ.

**ಟಿ.ಸಿ.ಎಸ್. ಸಾಮಾಜಿಕ ಹೊಣೆಗಾರಿಕೆ** ನಿಧಿ ಅನುದಾನದಡಿ, ವಿಜಯಪುರದ ಐತಿಹಾಸಿಕ ತಾಜ್ ಬಾವಡಿ, ಪುನರುಜ್ಜೀವನ.

**ಶ್ರೇಷ್ಠ ಅಭಿಯಂತರ, ಭಾರತರತ್ನ,** ಸರ್ ಎಂ. ವಿಶ್ವೇಶ್ವರಾಯ ಅವರ ಜನ್ಮ ದಿನವಿಂದು; ರಾಷ್ಟ್ರೀಯ ಅಭಿಯಂತರರ ದಿನಾಚರಣೆ.

**'ಮಾನವ ಹಕ್ಕುಗಳತ್ತ ಆದ್ಯತೆ ನೀಡಿ,** ಗಮನಹರಿಸೋಣ', ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>